ಓ ಎಸ್ ನಂ. :53/2014

ಡಿ.ಡಬ್ಲ್ಯೂಃ 5

ಸಾಕ್ಷಿಯನ್ನು ದಿಃ 01-06-2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಿ ಪಾಟೀ ಸವಾಲಿಗೆ ಒಳಪಡಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ ವಾದಿ ಪರಃ ಶ್ರೀ ಪಿ.ಜಿ.ಹೆಚ್. ವಕೀಲರಿಂದಃ**

ನಾನು ಮೃತ 1 ನೇ ಪ್ರತಿವಾದಿಯ ಮನೆಯಲ್ಲಿ ಖಾಯಂ ವಾಸ್ತವ್ಯ ಮಾಡಿರುವುದಿಲ್ಲ. ನಾನು ಯಾವುದೇ ಕಾಲದಲ್ಲಿಯೂ ಮೃತ 1 ನೇ ಪ್ರತಿವಾದಿಯ ಶೂಶ್ರುಷೆ ಮಾಡಿರುವುದಿಲ್ಲ ಎಂದರೆ ಆಗಾಗ್ಗೆ ಹೋಗಿ ಬರುತ್ತಿದ್ದೆ ಎಂದು ನುಡಿಯುತ್ತಾರೆ.1 ನೇ ಪ್ರತಿವಾದಿಯು ನನ್ನ ತಂದೆಯವರ ಸಹಾಯದಿಂದಲೇ ದತ್ತಕ ಪತ್ರ ಹಾಗೂ ಮರಣ ಶಾಸನವನ್ನು ಮಾಡಿಸಿರುತ್ತಾರೆ. 1 ನೇ ಪ್ರತಿವಾದಿಯು ಬರೆದಿರುವ ಮರಣ ಶಾಸನವನ್ನು ನಾನು ಓದಿ ತಿಳಿದುಕೊಂಡಿರುವುದಿಲ್ಲ. ಮರಣ ಶಾಸನವನ್ನು ಎಲ್ಲಿ ಮತ್ತು ಯಾವಾಗ ಬರೆಸಿರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. 1 ನೇ ಪ್ರತಿವಾದಿಯು ಯಾವುದೇ ಕಾಲದಲ್ಲಿಯೂ ಮರಣ ಶಾಸನವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ವಿಲುನಾಮೆ ಮಾಡಿರುವುದಾಗಿ ದಾಖಲಾತಿಯನ್ನು ಸೃಷ್ಟಿಸಿಕೊಂಡು ಸುಳ್ಳು ಪ್ರತಿಪಾದನೆ ಮಾಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟಂತೆ ಮರಣ ಶಾಸನವನ್ನು ಮಾಡುವ ಹಕ್ಕು ಮತ್ತು ಅಧಿಕಾರ 1 ನೇ ಪ್ರತಿವಾದಿಗೆ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಹಕ್ಕನ್ನು ಮತ್ತು ಹಿಸ್ಸೆಯನ್ನು ತಪ್ಪಿಸುವ ಉದ್ದೇಶದಿಂದ ಸುಳ್ಳು ಪ್ರತಿಪಾದನೆ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು,

ಕುಮಟಾ